ಓ.ಎಸ್. ನಂ. 241/18
ಪಿ ಡಬ್ಲ್ಯೂ-2

**ಸಾಕ್ಷಿಯನ್ನು ದಿನಾಂಕ 05-11-2025 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು - ಪ್ರತಿವಾದಿಗಳ ಪರ ಶ್ರೀ MH ವಕೀಲರಿಂದಃ**

ವಾದಿಗಳ ಪರಿಚಯ ನನಗೆ ಇರುತ್ತದೆ. ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆಯಲು ಬಂದಾಗ ಅವರ ಪರಿಚಯ ನನಗೆ ಆಗಿರುತ್ತದೆ. ಅದಕ್ಕೂ ಮೊದಲು ವಾದಿಯ ಪರಿಚಯ ನನಗೆ ಇರಲಿಲ್ಲ. 2015 ಅಕ್ಟೋಬರ್ ತಿಂಗಳಲಿನಲ್ಲಿ ವಾದಿಯ ಪರಿಚಯ ನನಗೆ ಆಗಿರುತ್ತದೆ. ನಾನು ದಾವಾ ಆಸ್ತಿ ಇರುವ ಗ್ರಾಮದ ಪಕ್ಕದಲ್ಲಿ ವಾಸ ಮಾಡುತ್ತಿರುವ ಕಾರಣ ದಾವಾ ಆಸ್ತಿ ನಾನು ನೋಡಿರುತ್ತೇನೆ. ದಿಃ 30.10.2015 ರಂದು ದಾವಾ ಆಸ್ತಿಯನ್ನು ಮಾರಾಟ ಮಾಡುವ ಸಲುವಾಗಿ ಮಾತುಕತೆ ಕಂತೆವಡೇರಹಳ್ಳಿ ಗ್ರಾಮದಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನಾನು, ವಾದಿ, 1 ನೇ ಪ್ರತಿವಾದಿ ಮತ್ತು ಗೋವಿಂದರಾಜು ರವರು ಇದ್ದೆವು. ಮಾತುಕತೆ ಆದಾಗ ಯಾವುದೇ ಬರವಣಿಗೆಯನ್ನು ಮಾಡಿರುವುದಿಲ್ಲ. ದಾವಾ ಆಸ್ತಿಯನ್ನು 1 ಲಕ್ಷ 10 ಸಾವಿರ ರೂಗಳಿಗೆ ಮಾರಾಟ ಮಾಡುವುದಾಗಿ ಮಾತುಕತೆ ಆಗಿರುತ್ತದೆ. 2015 ನೇ ಸಾಲಿನಲ್ಲಿ ದಾವಾ ಆಸ್ತಿಯ ಬೆಲೆ 3 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಮಾತುಕತೆ ಆದ ಮರು ದಿನದಂದು ಕೊರಟಗೆರೆಯಲ್ಲಿ ಕ್ರಯದ ಕರಾರು ಪತ್ರವನ್ನು ಬರೆದುಕೊಂಡಿರುತ್ತಾರೆ. ಕ್ರಯದ ಕರಾರು ಪತ್ರವನ್ನು ಪ್ರಕಾಶ್ ಕುಮಾರ್ ಟಿ ಡಿ ರವರು ಬರೆದಿರುತ್ತಾರೆ. ಕರಾರು ಪತ್ರ ಬರೆಯಲು ವಾದಿ ಮಾಹಿತಿ ನೀಡಿರುವುದಿಲ್ಲ.

ಕರಾರು ಪತ್ರವನ್ನು ಬರೆದಾಗ ವಾದಿ, ಪ್ರತಿವಾದಿಗಳು ನಾನು, ಗೋವಿಂದರಾಜು ರವರು ಇದ್ದೆವು. ಕರಾರು ಪತ್ರವನ್ನು ಮದ್ಯಾಹ್ನ ಸುಮಾರು 12 ಗಂಟೆ ಸಮಯದಲ್ಲಿ ಬರೆದಿರುತ್ತಾರೆ. ದಿಃ 02.11.2015 ರಂದು ಕರಾರು ಪತ್ರ ನೊಂದಾವಣಿ ಆಗಿರುತ್ತದೆ. ಅದೇ ದಿನಾಂಕದಂದು ವಾದಿ, 1 ನೇ ಪ್ರತಿವಾದಿಗೆ ಮುಂಗಡವಾಗಿ 70 ಸಾವಿರ ರೂಗಳನ್ನು ನೀಡಿರುತ್ತಾರೆ. ಸದರಿ 70 ಸಾವಿರ ರೂ 500 ಮುಖ ಬೆಲೆಯ ನೋಟುಗಳಾಗಿರುತ್ತವೆ. ವಾದಿ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 1 ನೇ

ಪ್ರತಿವಾದಿಗೆ ದರಕಾಸ್ತು ನಲ್ಲಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕರಾರು ಪತ್ರ ಬರೆದ ದಿನಾಂಕದಂದು ನಾನು ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. 2015 ನೇ ಸಾಲಿನಲ್ಲಿ 4 ನೇ ಪ್ರತಿವಾದಿಯ ಮದುವೆ ನಿಶ್ಚಯವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಮದುವೆಯ ಖರ್ಚುಗಳಿಗಾಗಿ 1 ನೇ ಪ್ರತಿವಾದಿಯು ವಾದಿಯ ಬಳಿ ಸಾಲವಾಗಿ 1 ಲಕ್ಷ ಹಣವನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಸದರಿ ಹಣದ ಭದ್ರತೆಗಾಗಿ ಕರಾರು ಪತ್ರವನ್ನು ಬರೆದುಕೊಟ್ಟು ಹಣ ನೀಡುವುದಾಗಿ ಹೇಳಿದ ಕಾರಣ ಸದರಿ ಹಣದ ಭದ್ರತೆಗಾಗಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕರಾರು ಪತ್ರ ದಿನಾಂಕದಂದು ಪ್ರತಿವಾದಿಗಳು ಅಡಮಾನ ಪತ್ರ ಬರೆದುಕೊಡಲು ಹೇಳಿದ್ದು ಆದರೆ ಅದಕ್ಕೆ ವಾದಿಯು ಒಪ್ಪದೆ ಇರುವ ಕಾರಣ 1 ಲಕ್ಷ ಹಣದ ಭದ್ರತೆಗಾಗಿ ವಾದಿಯು ಪ್ರತಿವಾದಿಗಳಿಂದ ಕರಾರು ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪ್ರತಿವಾದಿಗಳು 1 ಲಕ್ಷ ಹಣವನ್ನು ವಾಪಸ್ಸು ನೀಡಲು ಸಿದ್ದರಿದ್ದು ಆ ಹಣವನ್ನು ಪಡೆದುಕೊಂಡು ಕ್ರಯದ ಕರಾರು ಪತ್ರವನ್ನು ವಜಾ ಗೊಳಿಸುವಂತೆ ವಾದಿಗೆ ಕೇಳಿದ್ದು ವಾದಿಯು ಅದಕ್ಕೆ ಒಪ್ಪಿರುವುದಿಲ್ಲ ಎಂದರೆ ಸರಿಯಲ್ಲ. ಆ ವಿಚಾರವಾಗಿ ವಾದಿ ಮತ್ತು ಪ್ರತಿವಾದಿಗಳ ನಡುವೆ ಸಾಕಷ್ಟು ಪಂಚಾಯಿತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ.

ವಾದಿ ಪ್ರತಿವಾದಿಗೆ ನೋಟೀಸನ್ನು ನೀಡಿರುತ್ತಾರೆ. ಸದರಿ ನೋಟೀಸಿಗೆ ಪ್ರತಿವಾದಿಗೆ ಪ್ರತಿಉತ್ತರ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2018 ನೇ ಸಾಲಿನಲ್ಲಿ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಕರಾರು ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಕರಾರು ಪತ್ರಕ್ಕೆ 1 ನೇ ಪ್ರತಿವಾದಿಯು ಕನ್ನಡ ಭಾಷೆಯಲ್ಲಿ ಉಳಿದವರು ಯಾವ ಭಾಷೆಯಲ್ಲಿ ರುಜು ಮಾಡಿದ್ದಾರೆಂದು ನನಗೆ ನೆನಪಿಲ್ಲ. ದಾವಾ ಆಸ್ತಿಯ ಚಕ್ಕುಬಂ ದಿ ನನಗೆ ಹೇಳಲು ಆಗುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ದಾವಾ ಆಸ್ತಿಯನ್ನು ಮಾಡುವುದರ ಸಲುವಾಗಿ ಯಾವುದೇ ಕ್ರಯದ ಕರಾರು ಆಗಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು ವಾದಿಯಿಂದ ಪಡೆದ 1 ಲಕ್ಷ ಹಣವನ್ನು ನೀಡಲು ಸಿದ್ದರಿದ್ದು ಆ ಸಂಬಂಧ ನನ್ನನ್ನು ಪಂಚಾಯ್ತಿದಾನನ್ನಾಗಿ ಬರಲು ಕರೆದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಒತ್ತಾಯದಂತೆ ನಾನು ಅವರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

ಓ.ಎಸ್. ನಂ. 241/18
ಪಿ ಡಬ್ಲ್ಯೂ-2

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
***Koratagere.***